ಕರ್ನಾಟಕ ಸರ್ಕಾರ
**ಉಪ ನಿರ್ದೇಶಕರು (ಗ್ರಾಮೀಣ ಕೈಗಾರಿಕೆ) ರವರ ಕಛೇರಿ,**
**ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಜಿಲ್ಲಾ ಪಂಚಾಯತ, ಕಲಬುರಗಿ**
ಜಿಲ್ಲಾ ಕೈಗಾರಿಕಾ ಕೇಂದ್ರ, 1ನೇ ಮಹಡಿ, ವಿ.ನಿ.ಸಂಖ್ಯೆ-16, ಕೈಗಾರಿಕಾ ವಸಾಹತು, ಜೇವರ್ಗಿ ಕ್ರಾಸ್, ಎಂ.ಎಸ್.ಕೆ.ಮಿಲ್. ರಸ್ತೆ, ಕಲಬುರಗಿ-585102
ದೂ.ಸಂ.: 08472-221784, 295784. Email ID:ddkvi-gulbarga@karnatakaindustry.gov.in

ಸಂ.:ಉನಿಗ್ರಾಕೈ/ಜಿಪಂಕ/ಪತ್ರಿಕಾ ಪ್ರಕಟಣೆ/2026-27 ದಿನಾಂಕ:18-07-2026.

# ಪತ್ರಿಕಾ ಪ್ರಕಟಣೆ

**ಕಲಬುರಗಿ ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ ವಾಸವಾಗಿರುವ ವೃತ್ತಿನಿರತ ಅಭ್ಯರ್ಥಿಗಳಿಂದ ಉಚಿತವಾಗಿ ಧೋಬಿ ವೃತ್ತಿ, ಕ್ಷೌರಿಕ ವೃತ್ತಿಯ ಉಪಕರಣಗಳು ಸಾಮಾನ್ಯ ವರ್ಗದವರಿಗೆ ಹಾಗೂ ಪ್ರೋರ್ಟೆಬಲ್ ಫ್ರಿ ಹ್ಯಾಂಡ್ ವಿದ್ಯುತಚಾಲಿತ ಹೊಲಿಗೆಯಂತ್ರಗಳನ್ನು ಪರಿಶಿಷ್ಠ ಜಾತಿ ಹಾಗೂ ಪರಿಶಿಷ್ಠ ಪಂಗಡ ವರ್ಗದವರಿಗೆ ಮಾತ್ರ ಪಡೆಯುವುದಕ್ಕಾಗಿ ಅರ್ಜಿ ಅಹ್ವಾನ.**

2026-27ನೇ ಸಾಲಿನ ಜಿಲ್ಲಾ ವಲಯ ಯೋಜನೆಯಡಿ ಕೈಗಾರಿಕಾ ವಿಭಾಗ, ಜಿಲ್ಲಾ ಪಂಚಾಯತ, ಕಲಬುರಗಿ ವತಿಯಿಂದ ಉಚಿತವಾಗಿ ಧೋಬಿ ವೃತ್ತಿ ಹಾಗೂ ಕ್ಷೌರಿಕ ವೃತ್ತಿಯ ಉಪಕರಣಗಳು (ಸಾಮಾನ್ಯ ವರ್ಗದವರಿಗೆ) ಹಾಗೂ ಪ್ರೋರ್ಟೆಬಲ್ ಫ್ರೀ ಹ್ಯಾಂಡ್ ವಿದ್ಯುತಚಾಲಿತ ಹೊಲಿಗೆಯಂತ್ರಗಳನ್ನು (ಪರಿಶಿಷ್ಠ ಜಾತಿ ಹಾಗೂ ಪರಿಶಿಷ್ಠ ಪಂಗಡ ವರ್ಗದವರಿಗೆ ಮಾತ್ರ) ಪಡೆಯುವುದಕ್ಕಾಗಿ ಕಲಬುರಗಿ ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ ವಾಸವಾಗಿರುವ ವೃತ್ತಿನಿರತ ಕುಶಲಕರ್ಮಿಗಳಿಂದ ತಾಲೂಕುವಾರು ಹಾಗೂ ಪ್ರವರ್ಗವಾರು ಅರ್ಜಿಗಳನ್ನು **ದಿ:20-07-2026 ರಿಂದ ದಿ:30-09-2026ರ ವರೆಗೆ** ವೆಬ್‌ಸೈಟ್: www.zpkalaburagi.karnataka.gov.in ಹಾಗೂ kalaburagi.nic.in ಮುಖಾಂತರ ಅರ್ಜಿಗಳನ್ನು ಅಹ್ವಾನಿಸಲಾಗಿದೆ.

- **ಅರ್ಹತೆಗಳು:**
- ಗ್ರಾಮೀಣ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸತಕ್ಕದ್ದು.
- ಧೋಬಿ ವೃತ್ತಿ ಹಾಗೂ ಕ್ಷೌರಿಕ ವೃತ್ತಿಯ ಉಪಕರಣ ಪಡೆಯುವುದಕ್ಕಾಗಿ ಎಲ್ಲ ವರ್ಗದವರು ಅರ್ಜಿ ಸಲ್ಲಿಸಬಹುದು.
- ವಿದ್ಯುತಚಾಲಿತ ಹೊಲಿಗೆಯಂತ್ರ ಪಡೆಯುವುದಕ್ಕಾಗಿ ಪರಿಶಿಷ್ಠ ಜಾತಿ/ ಪರಿಶಿಷ್ಟ ಪಂಗಡ ಪ್ರವರ್ಗದವರು ಮಾತ್ರ ಅರ್ಜಿ ಸಲ್ಲಿಸಬಹುದು.
- ಅರ್ಜಿ ಸಲ್ಲಿಸುವ ಅಭ್ಯರ್ಥಿಯ ವಯಸ್ಸು ಕನಿಷ್ಠ 18 ವರ್ಷಗಳು ಇರತಕ್ಕದ್ದು. (ಅರ್ಜಿ ಸಲ್ಲಿಸುವ ಮೊದಲನೇ ದಿನಾಂಕವಾದ 20-07-2026ಕ್ಕೆ)
- ಒಂದು ಕುಟುಂಬಕ್ಕೆ ಒಂದು ಅರ್ಜಿ ಸಲ್ಲಿಸಲು ಮಾತ್ರ ಅವಕಾಶವಿರುತ್ತದೆ.
- ಸರ್ಕಾರಿ ನೌಕರರು ಅಥವಾ ಅವರ ಅವಲಂಬಿತರು ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ.
- ಆನ್‌ಲೈನ್‌ನಲ್ಲಿ www.zpkalaburagi.karnataka.gov.in ಹಾಗೂ kalaburagi.nic.in ವೆಬ್‌ಸೈಟ್ ಮುಖಾಂತರ ಅವಶ್ಯ ಮಾಹಿತಿ ಭರ್ತಿ ಮಾಡಿ ಮತ್ತು ಸಂಬಂಧಿಸಿದ ದಾಖಲೆಗಳ ಅಪ್ಲೋಡ್ ಮಾಡುವ ಮೂಲಕ ನಿಗದಿತ ದಿನಾಂಕದೊಳಗಾಗಿ ಅರ್ಜಿ ಸಲ್ಲಿಸುವುದು.

ಹೆಚ್ಚಿನ ಮಾಹಿತಿಗಾಗಿ ಸದರಿ ವೆಬ್‌ಸೈಟ್ ವೀಕ್ಷಿಸಬಹುದು ಅಥವಾ ಉಪ ನಿರ್ದೇಶಕರು (ಗ್ರಾಮೀಣ ಕೈಗಾರಿಕೆ) ರವರ ಕಛೇರಿ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಜಿಲ್ಲಾ ಪಂಚಾಯತ, ಕಲಬುರಗಿ, ಜಿಲ್ಲಾ ಕೈಗಾರಿಕಾ ಕೇಂದ್ರ, 1ನೇ ಮಹಡಿ, ವಿಶೇಷ ನಿವೇಷನ ಸಂಖ್ಯೆ:ಎಸಪಿಎಲ್-16, ಕೈಗಾರಿಕಾ ವಸಾಹತು, ಜೇವರ್ಗಿ ಕ್ರಾಸ್, ಎಂ.ಎಸ್.ಕೆ. ಮಿಲ್ಲ್ ರಸ್ತೆ, ಕಲಬುರಗಿ ಅಥವಾ ಆಯಾ ತಾಲೂಕಿನ ಕೈಗಾರಿಕಾ ವಿಸ್ತರಣಾಧಿಕಾರಿಗಳಿಗೆ ಸಂಪರ್ಕಿಸಬಹುದಾಗಿದೆ.

ಉಪ ನಿರ್ದೇಶಕರು (ಗ್ರಾ.ಕೈ.),
ಜಿಲ್ಲಾ ಪಂಚಯತ್, ಕಲಬುರಗಿ.

# ದೃಢೀಕರಣ ಪತ್ರ

ಶ್ರೀ/ಶ್ರೀಮತಿ____________________ತಂದೆ/ಗಂಡ ____________________ಇವರು ____________________ ಗ್ರಾಮದಲ್ಲಿ ____________________ ವರ್ಷಗಳಿಂದ ವಾಸಿಸುತ್ತಿದ್ದು, ಸದರಿಯವರು ____________________ ವರ್ಷಗಳಿಂದ ____________________ ವೃತ್ತಿಯನ್ನು ಮಾಡುತ್ತಿರುವರೆಂದು ಈ ಮೂಲಕ ದೃಢೀಕರಿಸಲಾಗಿದೆ.

ಪಂಚಾಯತ ಅಭಿವೃದ್ಧಿ ಅಧಿಕಾರಿಗಳು/<br>
ಕೈಗಾರಿಕಾ ವಿಸ್ತರ್ಣಾಧಿಕಾರಿಗಳು<br>
(ಸಹಿ ಮತ್ತು ಕಛೇರಿಯ ಮೊಹರಿನೊಂದಿಗೆ)